# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 260 (297) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ದಿನೇಶ್ ಗೂಳಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 09.12.2025 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕೈಗಾರಿಕಾ ಕ್ಷೇತ್ರದ ಸಮಗ್ರ ಬೆಳವಣಿಗೆಗಾಗಿ ಸರ್ಕಾರದ ಗಣನೀಯ ಕ್ರಮಗಳು ಮತ್ತು ಪೂರಕವಾಗಿ ಹೊಸ ಕೈಗಾರಿಕಾ ನೀತಿ 2025-30ನ್ನು ಜಾರಿಗೊಳಿಸಿದ ಕುರಿತಾದ ಅಭಿವೃದ್ಧಿ ಪರ ಬೆಳವಣಿಗೆಗಳೇನು; | ಕರ್ನಾಟಕವು ವಿಪುಲ ಅವಕಾಶಗಳು ಮತ್ತು ನವೋನ್ವೇಷಣೆಗಳ ರಾಜ್ಯವಾಗಿದೆ. ಭವಿಷ್ಯದ ನಾಳೆಗಳನ್ನು ಇಂದೇ ಸಾಧ್ಯವಾಗಿಸುವಲ್ಲಿ ಇದು ಆದರ್ಶಪ್ರಾಯ ಸ್ಥಾನದಲ್ಲಿದೆ. ರಾಜ್ಯದ ಉತ್ಪಾದನಾ ಕಾರ್ಯಾಚರಣೆಗಳು ಅಭಿವೃದ್ಧಿ ಹೊಂದುತ್ತಿರುವ ಪರಿಸರ ವ್ಯವಸ್ಥೆ, ಸಬಲೀಕರಣ ಗೊಳಿಸುವ ಸಾಂಸ್ಥಿಕ ಮತ್ತು ನೀತಿಗಳ ವಾತಾವರಣ, ಅನುಕೂಲಕರ ವ್ಯವಹಾರಿಕ ಪರಿಸ್ಥಿತಿ ಹಾಗೂ ಬಲಿಷ್ಠವಾದ ಮೂಲಸೌಕರ್ಯಗಳ ನಿರ್ಣಾಯಕ ಸಾಧಕಗಳಿಂದ ಬೆಂಬಲಿತವಾಗಿದೆ.<br><br>ಕರ್ನಾಟಕ ಸರ್ಕಾರವು, ರಾಜ್ಯದಾದ್ಯಂತ ಸಮತೋಲಿತವಾದ, ಸುಸ್ಥಿರ ಹಾಗೂ ಎಲ್ಲರಿಗೂ ಪ್ರಗತಿಯ ಪ್ರಯೋಜನ ದೊರೆಯುವಂತಹ ಕೈಗಾರಿಕಾಭಿವೃದ್ಧಿಯನ್ನು ಖಾತರಿ ಪಡಿಸಲು ಕೈಗಾರಿಕಾ ನೀತಿ 2025-30ನ್ನು ರೂಪಿಸಿದೆ. |
| ಆ | ಹೊಸ ಕೈಗಾರಿಕಾ ನೀತಿಯನ್ವಯ ಉಂಟಾದ ಕೈಗಾರಿಕಾ ಅಭಿವೃದ್ಧಿ ಎಷ್ಟು; (ವಿವರ ನೀಡುವುದು) | ಹೊಸ ಕೈಗಾರಿಕಾ ನೀತಿ 2025-2030ನ್ನು ಜಾರಿಗೆ ತಂದ ನಂತರ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 93 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು ಇವುಗಳಿಂದ ರೂ. 5,50,805 ಕೋಟಿ ಮೊತ್ತ ಬಂಡವಾಳ ಹೂಡಿಕೆ ಮತ್ತು 8,76,233 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. |
| ಇ | ರಾಜ್ಯದ ಎಲ್ಲಾ ಜಿಲ್ಲಾ ಪ್ರದೇಶಗಳಿಗೂ ಗಣನೀಯ ಪ್ರಮಾಣದಲ್ಲಿ ಕೈಗಾರಿಕೆಗಳ ವಿಸ್ತರಣೆ ಮಾಡುವ ಅಭಿವೃದ್ಧಿ ಪರ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರದ ಕ್ರಮಗಳೇನು; | ➢ 2025-30 ಕೈಗಾರಿಕಾ ನೀತಿಯು ರಾಜ್ಯದ ಸಮಗ್ರ ಅಭಿವೃದ್ಧಿ ಗುರಿಯೊಂದಿಗೆ ಬೆಂಗಳೂರಿನಿಂದ ಹೊರಗಡೆ ಕೈಗಾರಿಕಾ ಹಿಂದುಳಿದ ಪ್ರದೇಶವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.<br><br>➢ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳಲ್ಲಿ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ನೀತಿಯಲ್ಲಿ ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳಾಗಿ ವರ್ಗಿಕರಿಸಿದೆ. ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳು/ಜಿಲ್ಲೆಗಳನ್ನು ವಲಯ-1 ಮತ್ತು ವಲಯ-2 ರಲ್ಲಿ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ವಲಯ-3 ರಲ್ಲಿ ವರ್ಗೀಕರಿಸಲಾಗಿದೆ.<br><br>➢ ರಾಜ್ಯದ ಸಮತೋಲಿತ ಕೈಗಾರಿಕಾ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಗಳು / ತಾಲ್ಲೂಕುಗಳಲ್ಲಿ ಹೂಡಿಕೆಗಳನ್ನು ಆಕರ್ಷಿಸಲು ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. |

| | | |
|---|---|---|
| ಈ | ರಾಜ್ಯದಲ್ಲಿ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಸೂಕ್ತ ಪ್ರಮಾಣದ ಉದ್ಯೋಗವಕಾಶಗಳನ್ನು ಒದಗಿಸಿಕೊಡುವ ದಿಶೆಯಲ್ಲಿನ ಸರ್ಕಾರದ ಕಟ್ಟು ನಿಟ್ಟಿನ ಕ್ರಮಗಳೇನು; | ಕೈಗಾರಿಕಾ ನೀತಿ 2025-2030ರ ಅಡಿಯಲ್ಲಿ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕೆಗಳು ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಹಾಗೂ ಗ್ರೂಪ್-ಡಿ ಉದ್ಯೋಗಗಳನ್ನು 100% ಕನ್ನಡಿಗರಿಗೆ ನೀಡುವ ಷರತ್ತು ವಿಧಿಸಲಾಗುತ್ತಿದೆ. |
| ಉ | ಹಿಂದಿನ ಸರ್ಕಾರದ ಅವಧಿಯಲ್ಲಿ ಎಷ್ಟು ಉದ್ಯೋಗ ಸೃಷ್ಟಿಸಲಾಗಿದೆ; (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು) | ಹಿಂದಿನ ಸರ್ಕಾರದ ಅವಧಿಯಲ್ಲಿ (2018-19 ರಿಂದ 2022-23 ರವರೆಗೆ) SHLCC/SLSWCCಗಳಲ್ಲಿ ಅನುಮೋದನೆಯಾದ ಒಟ್ಟು 1878 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ. 456841.90 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮತ್ತು 800482 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. ಇವುಗಳ ಪೈಕಿ 260 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ರೂ. 98662.7 ಕೋಟಿ ಮೊತ್ತದ ಬಂಡವಾಳ ಹೂಡಿಕೆಯಾಗಿದೆ ಹಾಗೂ 197208 ಸಂಖ್ಯೆಯ ಉದ್ಯೋಗ ಸೃಜನೆಯಾಗಿದೆ. ಉಳಿದ ಯೋಜನೆಗಳು ವಿವಿಧ ಅನುಷ್ಠಾನಹಂತಗಳಲ್ಲಿವೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಊ | ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದಲ್ಲಿ ಹೂಡಿಕೆಯಾದ ವಿದೇಶಿ ಬಂಡವಾಳ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದಲ್ಲಿ ಹೂಡಿಕೆಯಾದ ವಿದೇಶಿ ಬಂಡವಾಳ ವಿವರ ಕೆಳಕಂಡಂತಿದೆ.<br><br><table><tr><th>Amt</th><th>2023-24</th><th>2024-25</th><th>2025-26 (April-Sept)</th></tr><tr><td>Rs. In Crores</td><td>54,427</td><td>56,030</td><td>80,997</td></tr></table> |
| ಋ | ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಎಷ್ಟು ಉದ್ಯೋಗ ಸೃಷ್ಟಿಸಲಾಗಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಸೃಷ್ಟಿಯಾಗಲಿರುವ ಉದ್ಯೋಗಗಳ ಪ್ರಮಾಣ ಎಷ್ಟು? (ಅಂಕಿ ಅಂಶಗಳನ್ನು ನೀಡುವುದು) | ಕಳೆದ ಮೂರು ವರ್ಷಗಳಲ್ಲಿ (2022-23 ರಿಂದ ಅಕ್ಟೋಬರ್-2025ರ ಅಂತ್ಯದವರೆಗೆ) SHLCC/SLSWCC ಸಭೆಗಳಲ್ಲಿ ಅನುಮೋದನೆಯಾದ ಒಟ್ಟು 1886 ಯೋಜನೆಗಳಿಂದ 6,92,545 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ.<br><br>ಇವುಗಳ ಪೈಕಿ 67 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ 93,925 ಸಂಖ್ಯೆಯ ಉದ್ಯೋಗ ಸೃಜನೆಯಾಗಿದೆ. |

ಸಿಐ 342 ಎಸ್‌ಪಿಐ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ

**Details of Approved Projects in SHLCC and SLSWCC from 2018-19 to 2022-23 - [redacted]**

| District | Total Projects | | | Implemented | | | Under Implementation | | | Dropped | | |
|---|---|---|---|---|---|---|---|---|---|---|---|---|
| | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) |
| Bagalkote | 29 | 7641.05 | 8374 | 11 | 5273.62 | 3766 | 18 | 2367.43 | 4608 | 0 | 0 | 0 |
| Belgaum | 43 | 8768.52 | 15973 | 13 | 5006.98 | 2093 | 28 | 3695.54 | 13744 | 2 | 66 | 136 |
| Bellary | 52 | 88772.55 | 21704 | 27 | 25715.2 | 6137 | 30 | 62189.1 | 16219 | 2 | 4989.24 | 2060 |
| Bengaluru Rural | 358 | 51929.04 | 348095 | 43 | 16862.4 | 82257 | 298 | 30596.1 | 230105 | 17 | 4470.55 | 35733 |
| Bengaluru Urban | 107 | 18939.73 | 108339 | 30 | 6028.86 | 33383 | 74 | 12555.9 | 73826 | 3 | 355 | 1130 |
| Bidar | 6 | 277.33 | 548 | 1 | 15.11 | 25 | 5 | 262.22 | 523 | 0 | 0 | 0 |
| Chamarajanagara | 67 | 3752.85 | 8324 | 7 | 1807.84 | 2686 | 60 | 1945.01 | 5638 | 0 | 0 | 0 |
| Chikkaballapur | 177 | 18925.89 | 36288 | 7 | 408.9 | 847 | 158 | 18255.4 | 33490 | 12 | 261.61 | 1951 |
| Chikkamagaluru | 2 | 134.12 | 518 | 1 | 72.76 | 310 | 1 | 61.36 | 208 | 0 | 0 | 0 |
| Chitradurga | 9 | 4073.84 | 3422 | 1 | 167.57 | 151 | 7 | 3513.02 | 2513 | 1 | 393.25 | 758 |
| Dakshina Kannada | 13 | 54841.57 | 8849 | 1 | 17.35 | 120 | 12 | 54824.2 | 8729 | 0 | 0 | 0 |
| Davanagere | 10 | 2272.7 | 3948 | 2 | 200.17 | 127 | 7 | 724.9 | 2121 | 1 | 1347.63 | 1700 |
| Dharwad | 141 | 17563.45 | 50338 | 18 | 5580.39 | 22879 | 120 | 11934.2 | 27203 | 3 | 48.86 | 256 |
| Gadag | 2 | 2278.8 | 533 | 1 | 2200 | 515 | 1 | 78.8 | 18 | 0 | 0 | 0 |
| Hassan | 25 | 935.97 | 4030 | 4 | 76.55 | 279 | 21 | 859.42 | 3751 | 0 | 0 | 0 |
| Haveri | 9 | 1583.61 | 3132 | 4 | 604.04 | 2210 | 5 | 979.57 | 922 | 0 | 0 | 0 |
| Kalaburagi | 9 | 6210.37 | 1807 | 2 | 857.55 | 675 | 7 | 5352.82 | 1132 | 0 | 0 | 0 |
| Kolar | 109 | 6716.64 | 31616 | 15 | 1052.7 | 14626 | 87 | 5306.25 | 13867 | 7 | 357.69 | 3123 |
| Koppala | 21 | 21806.87 | 12561 | 10 | 16920.7 | 7220 | 12 | 4903.65 | 5416 | 0 | 0 | 0 |
| Mandya | 29 | 1599.02 | 2816 | 7 | 623.8 | 682 | 11 | 305.68 | 1190 | 11 | 669.54 | 944 |
| Mysuru | 126 | 5807.44 | 15529 | 12 | 1179.56 | 2766 | 110 | 4475.78 | 12166 | 4 | 152.1 | 597 |
| Raichuru | 14 | 261.61 | 668 | 0 | 0 | 0 | 14 | 261.61 | 668 | 0 | 0 | 0 |
| Ramanagara | 117 | 9810.16 | 28735 | 14 | 5338.79 | 7569 | 101 | 4881.2 | 21217 | 3 | 101.17 | 173 |

| District | Total Projects | | | Implemented | | | Under Implementation | | | Dropped | | |
|---|---|---|---|---|---|---|---|---|---|---|---|---|
| | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) | No of Pro | Invest (INR Cr) | Employ (Nos.) |
| Shivamogga | 2 | 58.75 | 130 | 0 | 0 | 0 | 2 | 58.75 | 130 | 0 | 0 | 0 |
| Tumakuru | 212 | 5991.06 | 26167 | 13 | 1427.83 | 1994 | 189 | 4369.42 | 22151 | 10 | 193.81 | 2022 |
| Udupi | 6 | 412.23 | 359 | 2 | 69.95 | 185 | 3 | 326.78 | 114 | 1 | 15.5 | 60 |
| Uttara Kannada | 4 | 155.3 | 393 | 1 | 88 | 300 | 3 | 67.3 | 93 | 0 | 0 | 0 |
| Vijayanagara | 2 | 518.6 | 551 | 1 | 64 | 20 | 1 | 454.6 | 531 | 0 | 0 | 0 |
| Vijayapura | 55 | 3477.8 | 6936 | 3 | 65.09 | 65 | 50 | 3378.3 | 6641 | 2 | 34.41 | 230 |
| Yadagiri | 118 | 4978.02 | 20749 | 9 | 937 | 3321 | 101 | 3703.16 | 16037 | 8 | 337.86 | 1391 |
| ZAcross Karnataka | 4 | 106347 | 29050 | 0 | 0 | 0 | 4 | 106347 | 29050 | 0 | 0 | 0 |
| **Grand Total** | **1878** | **456841.9** | **800482** | **260** | **98662.7** | **197208** | **1540** | **349034** | **554021** | **87** | **13794.2** | **52264** |